241

<u>ಕರ್ನಾಟಕ ವಿಧಾನ ಪರಿಷತ್ತು</u>

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2027
2 ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
3 ಉತ್ತರಿಸುವ ದಿನಾಂಕ : 17-03-2022
4 ಉತ್ತರಿಸುವವರು : ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗೈಲ್ (ಪೈಪ್‌ಲೈನ್ ಮೂಲಕ ಅಡುಗೆ ಅನಿಲ ವಿತರಿಸುವ ಸಂಸ್ಥೆ) ಸಂಸ್ಥೆಯು ರಸ್ತೆಯನ್ನು ಅಗೆದು ಹಾಕಿರುವ ಗ್ಯಾಸ್ ಪೈಪ್ ಲೈನ್‌ಗಳ ಮೇಲೆ ಸದರಿ ಪೈಪ್‌ಲೈನ್ ಎಷ್ಟು ಅಡಿ ಆಳದಲ್ಲಿದೆ ಎಂಬುದಾಗಿ ನಮೂದಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಮಾಹಿತಿಯನ್ನು ಬರೆಯುವ ಕುರಿತು ಸರ್ಕಾರದ ನಿಲುವೇನು; | ಭಾರತ ಸರ್ಕಾರದ PNGRB ನಿಯಮಾನುಸಾರ ನಗರ ಅನಿಲ ಸರಬರಾಜು ಪೈಪ್ ಲೈನ್‌ಗಳನ್ನು ಸಾಮಾನ್ಯವಾಗಿ 1.00 mtr ಆಳದಲ್ಲಿ (ಅಸ್ತಿತ್ವದಲ್ಲಿರುವ ನೈಸರ್ಗಿಕ ಅನಿಲ ಪೈಪ್‌ಲೈನ್‌ನಿಂದ ಪೈಪ್‌ನ ಮೇಲ್ಭಾಗದವರೆಗೆ) ಸಂಬಂಧಪಟ್ಟ ಭೂ ಮಾಲಿಕತ್ವ ಹೊಂದಿರುವ ಸಂಸ್ಥೆ / ಏಜೆನ್ಸಿ ರವರ ಒಪ್ಪಿಗೆಯನ್ನು ಪಡೆದು ಬಿಬಿಎಂಪಿ ವ್ಯಾಪ್ತಿಯಲ್ಲಿ ಅಳವಡಿಸಲಾಗುತ್ತಿದೆ.<br><br>ಗ್ಯಾಸ್ ಪೈಪ್ ಲೈನ್ ಮಾರ್ಗದ ಉದ್ದಕ್ಕೂ ರಸ್ತೆ ದಾಟುವ ಜಾಗದಲ್ಲಿ 50 mtrs ಮತ್ತು ನಾಲಾ ಕ್ರಾಸಿಂಗ್ ಪ್ರದೇಶದಲ್ಲಿ 500 mtrs ಗಳಿಗೆ ಕಾಂಕ್ರೀಟ್ ಮಾರ್ಕ್ ಗಳು ಮತ್ತು ಸ್ಟೀಲ್ ಮಾರ್ಕ್ ಗಳನ್ನು ಸ್ಥಾಪಿಸಲಾಗಿದೆ. ಸ್ಟೀಲ್ ಪೈಪ್ ಲೈನ್ ಗಳಲ್ಲಿ ಪ್ರತಿ 100 mtrs ಗೆ ಕಾಂಕ್ರೀಟ್ ಮಾರ್ಕ್‌ಗಳನ್ನು ಸ್ಥಾಪಿಸಲಾಗಿದೆ.<br><br>ಮುಂದುವರೆದು, ತೆರೆದ ಕಂದಕ ವಿಧಾನದಿಂದ ಗ್ಯಾಸ್ ಪೈಪ್‌ಲೈನ್ ಅನ್ನು ಅಳವಡಿಸಲಾಗುತ್ತಿದ್ದರೆ, ಹೆಚ್ಚಿನ ಒತ್ತಡದ ಅನಿಲ ಪೈಪ್‌ಲೈನ್ ಕೆಳಗಿರುವ ಬಗ್ಗೆ ಎಚ್ಚರಿಕೆಯನ್ನು ನೀಡುವ ಸಲುವಾಗಿ ಎಚ್ಚರಿಕೆಯ ಚಾಪೆಯನ್ನು ಅನಿಲ ಪೈಪ್ ಲೈನ್ ಮೇಲೆ ಹಾಕಲಾಗಿದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗೈಲ್ ಸಂಸ್ಥೆಯು ಪೈಪ್‌ಲೈನ್ ಮೂಲಕ ಅಡುಗೆ ಅನಿಲ ವಿತರಿಸಲು ರಸ್ತೆಯನ್ನು ಅಗೆದು ಪೈಪ್ ಲೈನ್ ಅಳವಡಿಸಲು ಬಿಬಿಎಂಪಿಯ ಆನ್‌ಲೈನ್ ವೇದಿಕೆ |

. . .2/-

| | | |
|---|---|---|
| | | Multi Agency Road Cutting Co-Ordination System (MARCCS) ಅಡಿಯಲ್ಲಿ GAIL India / GAIL GAS Ltd (ಪೈಪ್‌ಲೈನ್ ಮೂಲಕ ಅಡುಗೆ ಅನಿಲ ವಿತರಿಸುವ ಸಂಸ್ಥೆ) ಸಂಸ್ಥೆಗಳಿಗೆ ರಸ್ತೆ ಕತ್ತರಿಸಲು ಅನುಮತಿ ನೀಡಲು ಮಾತ್ರ ಕ್ರಮವಹಿಸಲಾಗುತ್ತಿದೆ. |
| ಆ | ಗ್ಯಾಸ್ ಪೈಪ್‌ಲೈನ್‌ಗಳು ಎಷ್ಟು ಆಳದಲ್ಲಿದೆ ಎಂದು ನಮೂದಿಸದೇ ಇರುವುದರಿಂದ ಬೇರೆ ಯಾವುದೇ ಇತರೆ ಇಲಾಖೆಗಳು ಅದೇ ಸ್ಥಳವನ್ನು ಅಗೆಯುವ ಸಂದರ್ಭದಲ್ಲಿ ಗ್ಯಾಸ್ ಪೈಪ್‌ಲೈನ್‌ಗಳಿಗೆ ಧಕ್ಕೆಯಾಗಿ ಅನಾಹುತವಾದರೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು; ಈ ಕುರಿತು ಸರ್ಕಾರದ ನಿಲುವೇನು; | ಸರ್ಕಾರವು ಸಮನ್ವಯ ಸಭೆಯಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಗ್ಯಾಸ್ ಪೈಪ್‌ಲೈನ್ ನೆಟ್ ವರ್ಕ್ ಪ್ರದೇಶಗಳಲ್ಲಿ ಗೇಲ್ ಗ್ಯಾಸ್ ತಯಾರಿಸಿರುವ Standard Operating Procedures (SOP) ಗಳನ್ನು ಸಂಬಂಧಪಟ್ಟ ಸಂಸ್ಥೆ / ಏಜೆನ್ಸಿಗಳಿಗೆ ಕಟ್ಟು ನಿಟ್ಟಾಗಿ ಪಾಲಿಸಲು ಸೂಚಿಸಿದೆ.<br><br>SOP ಯ ಪ್ರಕಾರ ಇತರ ಇಲಾಖೆಗಳು / ಯುಟಿಲಿಟಿ ಕಂಪನಿಗಳು BBMP ನೀಡಿರುವ ಅನುಮತಿ ಪತ್ರ ಮತ್ತು ಮಾರ್ಗ ನಕ್ಷೆಯೊಂದಿಗೆ ಲಿಖಿತ ರೂಪದಲ್ಲಿ GAIL ಗ್ಯಾಸ್ ಸಂಸ್ಥೆಗೆ ತಿಳಿಸಬೇಕಾಗಿರುತ್ತದೆ.<br><br>GAIL ಗ್ಯಾಸ್ Route Clearance ನೀಡುವ ಮೊದಲು ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿಯಾಗಿ ಪೈಪ್‌ಲೈನ್ ಮಾರ್ಗದ ತಪಾಸಣೆ ನಡೆಸುತ್ತದೆ ಮತ್ತು ಕಾಮಗಾರಿ ನಡೆಯುವ ಸಂದರ್ಭದಲ್ಲಿ ಸದರಿ ಸ್ಥಳದಲ್ಲಿ GAIL ಗ್ಯಾಸ್ ಸಂಸ್ಥೆಯ ಸಿಬ್ಬಂದಿಯನ್ನು ನಿಯೋಜಿಸುತ್ತದೆ.<br><br>SOP ಯನ್ನು ಅನುಸರಿಸದಿದ್ದಲ್ಲಿ ಮತ್ತು ಗ್ಯಾಸ್ ಪೈಪ್‌ಲೈನ್ ಹಾನಿಗೊಳಗಾದರೆ, GAIL GAS ಕಂಪನಿಯವರು PNGRB ಕಾಯಿದೆ ಮತ್ತು PMP ಕಾಯಿದೆಯಡಿಯಲ್ಲಿ ತಪ್ಪಿತಸ್ಥರ ವಿರುದ್ಧ ಪ್ರಕರಣವನ್ನು ದಾಖಲಿಸಲು ಕ್ರಮ ಕೈಗೊಳ್ಳಬಹುದು. ಗ್ಯಾಸ್ ಪೈಪ್ ಲೈನ್ ಅನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಅಳವಡಿಸಲಾಗುತ್ತಿರುವುದರಿಂದ ಹಾಗೂ ಸದರಿ ವಿಷಯವು ಅತ್ಯಗತ್ಯ ಸೇವೆಗಳಿಗೆ ಒಳಪಡುವುದರಿಂದ ಈ ಕಾಯ್ದೆಯು ಸಹ ಅನ್ವಯಿಸುತ್ತದೆ. |

| | | |
|---|---|---|
| | | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಾದ KPTCL / BESCOM / BWSSB / BSNL, etc., ರವರು ರಸ್ತೆ ಕತ್ತರಿಸಲು Multi Agency Road Cutting Co-Ordination System (MARCCS) ಅಡಿಯಲ್ಲಿ ಅನುಮತಿ ಕೋರಿದ ಸಂಧರ್ಭದಲ್ಲಿ GAIL India / GAIL GAS Ltd ರವರಿಗೆ ಆನ್‌ಲೈನ್‌ನಲ್ಲಿ ಗ್ಯಾಸ್ ಕೊಳವೆ ಮಾರ್ಗದ ಮಾಹಿತಿ ಸಲ್ಲಿಸಲು / ನೀಡಲು ಅವಕಾಶ ಕಲ್ಪಿಸುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ವಿವಿಧ ಇಲಾಖೆಗಳ ಮಧ್ಯೆ GAIL India Ltd / GAIL GAS Ltd ಸಂಸ್ಥೆಗಳು ಸಮನ್ವತೆಯನ್ನು ಸಾಧಿಸುತ್ತಿವೆ. ಇದರ ಜೊತೆಗೆ ಬಿಬಿಎಂಪಿ ವತಿಯಿಂದ ಅನುಮತಿ ನೀಡುವ ಸಂದರ್ಭದಲ್ಲಿ "Standard operating Procedure with KPTCL / BESCOM / BWSSB/ BSNL / GAIL India / GAIL GAS Ltd., etc. lines to be followed with necessary safety measures" ಎಂದು ಷರತ್ತು ವಿಧಿಸುವ ಪದ್ಧತಿ ಅಳವಡಿಸಿಕೊಳ್ಳಲಾಗಿರುತ್ತದೆ.<br><br>ಮೇಲ್ಕಂಡ ಕ್ರಮಗಳಿಂದ ಬಹಳಷ್ಟು ಅನಾಹುತಗಳನ್ನು ತಪ್ಪಿಸುವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಇದನ್ನು ಮೀರಿ ರಸ್ತೆ ಅಗೆಯುವ ಸಂದರ್ಭದಲ್ಲಿ ಗ್ಯಾಸ್ ಪೈಪ್‌ಲೈನ್‌ಗಳಿಗೆ ಧಕ್ಕೆ ಉಂಟು ಮಾಡುವ ವಿವಿಧ ಇತರೆ ಇಲಾಖೆಗಳೇ ನೇರ ಹೊಣೆಗಾರರಾಗಿರುತ್ತಾರೆ. |
| ಇ | ರಸ್ತೆಯ ಇಕ್ಕೆಲಗಳಲ್ಲಿ ರಸ್ತೆಯನ್ನು ಅಗೆದು ಹಾಕಿರುವ ಗ್ಯಾಸ್ ಲೈನ್‌ಗಳ ರಕ್ಷಣೆಯ ಹೊಣೆ ಯಾರಿಗೆ ಸೇರಿದೆ; ಈ ಕುರಿತು ಪೈಪ್‌ಲೈನ್ ಮೂಲಕ ಗ್ಯಾಸ್ ವಿತರಿಸುವ ಕಂಪನಿಯು ಎಷ್ಟು ತಿಂಗಳಿಗೊಮ್ಮೆ ಬಿ.ಬಿ.ಎಂ.ಪಿಗೆ ಗ್ಯಾಸ್ ಪೈಪ್‌ಲೈನ್ ಸುರಕ್ಷತೆಯ ಬಗ್ಗೆ ಮಾಹಿತಿ ನೀಡುವುದು? (ವಿವರ ನೀಡುವುದು) | GAIL ಗ್ಯಾಸ್ ಸಂಸ್ಥೆಯು ಪೈಪ್‌ಲೈನ್‌ಗಳ ಮಾಲಿಕತ್ವ ಮತ್ತು ಕಾರ್ಯಾಚರಣೆಯ ಜವಾಬ್ದಾರಿಯನ್ನು ಹೊಂದಿರುತ್ತದೆ ಹಾಗೂ GAIL ಗ್ಯಾಸ್ ಲಿಮಿಟೆಡ್ ಸಂಸ್ಥೆಯು ಪೈಪ್‌ಲೈನ್‌ಗಳ ಸುರಕ್ಷತೆ ಮತ್ತು ರಕ್ಷಣೆಯ ಜವಾಬ್ದಾರಿಯನ್ನು ಹೊಂದಿರುತ್ತದೆ.<br><br>ಸಂಬಂಧಪಟ್ಟ ಭೂ ಮಾಲಿಕತ್ವ ಹೊಂದಿರುವ ಸಂಸ್ಥೆ / ಏಜೆನ್ಸಿ ರವರ ಒಪ್ಪಿಗೆಯನ್ನು ಪಡೆದು, ಭಾರತ ಸರ್ಕಾರದ PNGRB ನಿಯಮಗಳಡಿ ರಚಿಸಲ್ಪಟ್ಟ ಮಾದರಿ ಸುರಕ್ಷತಾ ಮತ್ತು ರಕ್ಷಣಾ ಮಾನದಂಡಗಳನ್ನು ಅನುಸರಿಸಿ ನಗರ |

| | | |
|---|---|---|
| | | ಅನಿಲ ಸರಬರಾಜು ಪೈಪ್‌ಲೈನ್ ನೆಟ್ ವರ್ಕ್ ಗಳನ್ನು ಅಳವಡಿಸಲಾಗಿದೆ.<br><br>GAIL ಗ್ಯಾಸ್ ಸಂಸ್ಥೆಯು ಸಾರ್ವಜನಿಕರಿಗೆ ಅರಿವು ಮೂಡಿಸುವ ಅಭಿಯಾನಗಳನ್ನು ನಿಯಮಿತವಾಗಿ ಕೈಗೊಳ್ಳುತ್ತಿದೆ ಹಾಗೂ ಇಡೀ ಪೈಪ್‌ಲೈನ್‌ಅನ್ನು GAIL ಗ್ಯಾಸ್ Patrolling Team ನಿಂದ ಪರಿವೀಕ್ಷಿಸಲಾಗುತ್ತಿದೆ.<br><br>ಮುಂದುವರೆದು, ಗ್ಯಾಸ್ ಪೈಪ್ ಲೈನ್ ನೆಟ್ ವರ್ಕ್ ವಿವರಗಳನ್ನು ತ್ರೈಮಾಸಿಕವಾಗಿ GAIL ಗ್ಯಾಸ್ ನಿಂದ BBMP ಗೆ ನೀಡಲಾಗುತ್ತಿದೆ. |

**ಸಂಖ್ಯೆ: ನಅಇ 121 ಎಂಎನ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ